ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
Akkamahadevi Women's University, Vijayapura
ಕುಲಸಚಿವರು (ಮೌಲ್ಯಮಾಪನ) Registrar (Evaluation)
ವಿಜಯಪುರ-586108 Viajayapura-586108
Phone Number: 08352-229123 Fax Number 08352-229023

ಸಂಖ್ಯೆ: ಅಮವಿವಿ/ಪರೀಕ್ಷಾ/2017–18/1790 ದಿನಾಂಕ:23-07–2018

**ಸುತ್ತೋಲೆ**

ವಿಷಯ: ವಿಭಿನ್ನ ಸಾಮರ್ಥ್ಯವುಳ್ಳ (Diffrently Abled) ವಿದ್ಯಾರ್ಥಿಗಳಿಗೆ ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯವನ್ನು ನೀಡುವ ಬಗ್ಗೆ.

ಉಲ್ಲೇಖ:1) ಸರ್ಕಾರದ ಪತ್ರ ಸಂಖ್ಯೆ: ಇಡಿ 213 ಯು ಎನ್ ಇ 2017. ದಿನಾಂಕ:08–06–2018.

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21-07-2018.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಭಾಗಗಳ ಮುಖ್ಯಸ್ಥರಿಗೆ ಹಾಗೂ ವ್ಯಾಪ್ತಿಯಲ್ಲಿ ಬರುವ ಮಹಿಳಾ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಈ ಸುತ್ತೋಲೆಯ ಮೂಲಕ ತಿಳಿಸುವದೇನೆಂದರೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ದಿನಾಂಕ:21–12–2017 ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 19 ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 13 ರಲ್ಲಿ ಈ ಕೆಳಕಂಡ ತೀರ್ಮಾನ ತೆಗೆದುಕೊಂಡಿರುತ್ತದೆ.

**"ವಿಭಿನ್ನ ಸಾಮರ್ಥ್ಯವುಳ್ಳ (Diffrently Abled) ವಿದ್ಯಾರ್ಥಿಗಳಿಗೆ ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯವನ್ನು ನೀಡುವ ಕುರಿತು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳುಂತೆ ಸಭೆಯಲ್ಲಿ ಸೂಚಿಸಲಾಯಿತು"**

ಆದ್ದರಿಂದ ಈ ಮೇಲ್ಕಂಡ ಸಭೆಯ ನಿರ್ಣಯದ ಪ್ರಕಾರ ಅನುಷ್ಠಾನಗೋಳಿಸಲು ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

23/7

ಕುಲಸಚಿವರು(ಮೌಲ್ಯಮಾಪನ)
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

ಗೆ,

1) ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಎಲ್ಲ ವಿಭಾಗಗಳ ಮುಖ್ಯಸ್ಥರಿಗೆ
2) ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಎಲ್ಲ ಸಂಯೋಜಿತ ಮಹಿಳಾ ಮಹಾವಿದ್ಯಾಲಯಗಳ ಪ್ರಾಮಶುಪಾಲರಿಗೆ

ಪ್ರತಿ:

1. ಮಾನ್ಯ ಕುಲಪತಿಗಳ ಅಪ್ತ ಸಹಾಯಕರಿಗೆ– ಮಾಹಿತಿಗಾಗಿ
2. ಕುಲಸಚಿವರ ಅಪ್ತ ಸಹಾಯಕರಿಗೆ– ಮಾಹಿತಿಗಾಗಿ

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 213 ಯುಎಸ್‌ಇ 2017

ಕರ್ನಾಟಕ ಸರ್ಕಾರದ ಸಚಿವಾಲಯ.
ಬಹುಮಹಡಿ ಕಟ್ಟಡ.
ಬೆಂಗಳೂರು. ದಿನಾಂಕ: 08.06.2018.

ಇಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ.
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ).
**ಬೆಂಗಳೂರು – 560 001.**

ಇವರಿಗೆ:

1. ಕುಲಸಚಿವರು. ಬೆಂಗಳೂರು ವಿಶ್ವವಿದ್ಯಾನಿಲಯ. ಬೆಂಗಳೂರು–560056.
2. ಕುಲಸಚಿವರು. ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು–570005.
3. ಕುಲಸಚಿವರು. ಕರ್ನಾಟಕ ವಿಶ್ವವಿದ್ಯಾನಿಲಯ. ಧಾರವಾಡ–580033.
4. ಕುಲಸಚಿವರು. ಕುವೆಂಪು ವಿಶ್ವವಿದ್ಯಾನಿಲಯ. ಶಂಕರಘಟ್ಟ. ಶಿವಮೊಗ್ಗ ಜಿಲ್ಲೆ–577451.
5. ಕುಲಸಚಿವರು. ಗುಲ್ಬರ್ಗಾ ವಿಶ್ವವಿದ್ಯಾನಿಲಯ. ಕಲಬುರಗಿ–585106.
6. ಕುಲಸಚಿವರು. ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳೂರು–574199.
7. ಕುಲಸಚಿವರು. ತುಮಕೂರು ವಿಶ್ವವಿದ್ಯಾನಿಲಯ. ತುಮಕೂರು–572101.
8. ಕುಲಸಚಿವರು. ಕನ್ನಡ ವಿಶ್ವವಿದ್ಯಾನಿಲಯ. ಹಂಪಿ – 583276.
9. ಕುಲಸಚಿವರು. ದಾವಣಗೆರೆ ವಿಶ್ವವಿದ್ಯಾನಿಲಯ. ದಾವಣಗೆರೆ.
10. ಕುಲಸಚಿವರು. ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ. ಬೆಳಗಾವಿ.
11. ಕುಲಸಚಿವರು. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯ. ಬಳ್ಳಾರಿ.
12. ಕುಲಸಚಿವರು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ. ಬೆಳಗಾವಿ.
13. ಕುಲಸಚಿವರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. ಮೈಸೂರು–570006.
14. ಕುಲಸಚಿವರು. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ. ವಿಜಯಪುರ–586101.
15. ಕುಲಸಚಿವರು. ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾನಿಲಯ. ಚಾಮರಾಜಪೇಟೆ. ಬೆಂಗಳೂರು.
16. ಕುಲಸಚಿವರು. ರಾಜ್ಯ ಜಾನಪದ ವಿಶ್ವವಿದ್ಯಾನಿಲಯ. ಗೊಟಗೋಡಿ. ಶಿಗ್ಗಾವಿ ತಾಲ್ಲೂಕು. ಹಾವೇರಿ ಜಿಲ್ಲೆ.
17. ಕುಲಸಚಿವರು. ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ. ಮೈಸೂರು.
18. ಕುಲಸಚಿವರು ಬೆಂಗಳೂರು ಉತ್ತರ ವಿಶ್ವವಿದ್ಯಾಲಯ. ತಮಕ ದೇವರಾಜು ಅರಸು ಬಡಾವಣೆ. ಕೋಲಾರ.
19. ಕುಲಸಚಿವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ. ಸೆಂಟ್ರಲ್ ಕಾಲೇಜು ಆವರಣ. ಬೆಂಗಳೂರು.

ಕುಲಸಚಿವರ ಕಾರ್ಯಾಲಯ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
V.C Office | Engg. Section | Store Section | Registrar Sign. | Hostel

ಮಾನ್ಯರೆ.

**ವಿಷಯ:** ವಿಭಿನ್ನ ಸಾಮರ್ಥ್ಯವುಳ್ಳ (Differently Abled) ವಿದ್ಯಾರ್ಥಿಗಳಿಗೆ ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯವನ್ನು ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಅವರ ದಿನಾಂಕ: 08.02.2018ರ ಪತ್ರ ಹಾಗೂ ಅದರೊಂದಿಗಿರುವ ಅಡಕಗಳ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ದಿನಾಂಕ: 21.12.2017ರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 19ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 13ರಲ್ಲಿ ಈ ಕೆಳಕಂಡ ತೀರ್ಮಾನ ತೆಗೆದುಕೊಂಡಿತು:

> "ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ((Differently Abled) ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯವನ್ನು ನೀಡುವ ಕುರಿತು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿಗಳನ್ನು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಯಿತು".

ಈ ನಿರ್ಣಯವನ್ನು ತಮ್ಮ ವಿಶ್ವವಿದ್ಯಾಲಯಗಳಲ್ಲಿ ಅನುಷ್ಠಾನಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ.

(ಎನ್.ವಿ.ಬ್ರಹ್ಮಚಾರಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1).

<u>ಪ್ರತಿ:</u>

**ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, #30, ಪ್ರಸನ್ನ ಕುಮಾರ್ ಬ್ಲಾಕ್, ವೈ ರಾಮಚಂದ್ರ ರೋಡ್, ಗಾಂಧಿನಗರ, ಬೆಂಗಳೂರು-560009.**

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

C.no - 2667/18 23
09/02/18

ಸಂ.ಕರಾಉಶಿಪ/36/Differently abled/2017-18/103 ದಿನಾಂಕ: 08.02.2018

ಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು-01

ಮಾನ್ಯರೇ,

ವಿಷಯ: ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ (Differently Abled) ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯಗಳನ್ನು ನೀಡುವ ಕುರಿತು.

ಉಲ್ಲೇಖ: 1) Letter dated: 28.03.2017 of General Secretary of National Federation of the Blind, Bangalore.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂಖ್ಯೆ. ಇಡಿ 213 ಯುಎನ್ಇ 2017,ದಿನಾಂಕ:18.05.2017.
3) Office Memorandum No. F.No.16-110/2003-DD. III, dated:26.02.2013 by the Government of India, Ministry of Social Justice and Empowerment, Department of Disability of Affairs).
4) ದಿನಾಂಕ:21.12.2017 ರಂದು ನಡೆದ ಪರಿಷತ್ತಿನ 19ನೇ ಸಾಮಾನ್ಯ ಸಭೆಯ ನಿರ್ಣಯ.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ (Differently Abled) ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯಗಳನ್ನು ನೀಡುವ ಕುರಿತ ಈ ವಿಷಯವನ್ನು ದಿನಾಂಕ: 21.12.2017 ರಂದು ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ವಿಷಯಸೂಚಿಯಾಗಿ ಮಂಡಿಸಲಾಗಿದ್ದು, ಸಭೆಯು ಕೂಲಂಕುಷವಾಗಿ ಚರ್ಚಿಸಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ.

**ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ (Differently Abled) ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯಗಳನ್ನು ನೀಡುವ ಕುರಿತು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಯಿತು.**

ಪರಿಷತ್ತಿನ ನಿರ್ಣಯವನ್ನು ಈ ಪತ್ರ ಮುಖೇನ ಅವಗಾಹನೆ ಹಾಗೂ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸುತ್ತೋಲೆಯನ್ನು ಹೊರಡಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
8.2.18
(ಡಾ.ಎಸ್.ಎ.ಕೋರಿ)
ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿ:

1. ಉಪಾಧ್ಯಕ್ಷರ ಆಪ್ತಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು, ಮಾಹಿತಿಗಾಗಿ.

ವಿಷಯ ಸಂಖ್ಯೆ: (13)

ವಿಷಯ: ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ (Differently Abled) ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯಗಳನ್ನು ನೀಡುವ ಕುರಿತು.

ಉಲ್ಲೇಖ: 1) Letter dated: 28.03.2017 of General Secretary of National Federation of the Blind, Bangalore.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂಖ್ಯೆ. ಇಡಿ 213 ಯುಎನ್ಇ 2017,ದಿನಾಂಕ:18.05.2017.

3) Office Memorandum No. F.No.16-110/2003-DD. III, dated:26.02.2013 by the Government of India, Ministry of Social Justice and Empowerment, Department of Disability of Affairs).

**ಪ್ರಸ್ತಾವನೆ:**

ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ (Differently Abled) ಪದವಿ ಪರೀಕ್ಷೆಗಳಲ್ಲಿ ವಿಶೇಷ ರಿಯಾಯತಿ ಮತ್ತು ಸೌಲಭ್ಯಗಳನ್ನು ನೀಡುವ ಕುರಿತು, ಜನರಲ್ ಸೆಕ್ರೆಟರಿ, ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಇವರು ಪ್ರಧಾನ ಕಾರ್ಯದರ್ಶಿಗಳಿಗೆ ದಿನಾಂಕ: 28.03.2017 ರಂದು ಪತ್ರ ಬರೆದಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರು ಉಲ್ಲೇಖಿತ ಪತ್ರದ ಪ್ರತಿಯನ್ನು ಲಗತ್ತಿಸಿ ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯಗಳನ್ನು ಏರ್ಪಡಿಸುವ ಕುರಿತಂತೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಮಂತ್ರಾಲಯವು ಅಧಿಕೃತ ಜ್ಞಾಪನ ಪತ್ರದೊಂದಿಗೆ ಮಾರ್ಗಸೂತ್ರಗಳನ್ನು ಹೊರಡಿಸಿರುತ್ತಾರೆ. ಸದರಿ ಮಾರ್ಗಸೂಚಿಗಳ ಪ್ರತಿಯನ್ನು ಈ ಟಿಪ್ಪಣಿಯೊಂದಿಗೆ ಲಗತ್ತಿಸಲಾಗಿದೆ. (Uniform and Comprehensive Guidelines for conducting examination for the persons with disabilities as issued Office Memorandum No. F.No.16-110/2003-DD. III, dated:26.02.2013 by the Government of India, Ministry of Social Justice and Empowerment, Department of Disability of Affairs).

1. ಕರ್ನಾಟಕ ಸರ್ಕಾರ, ಉನ್ನತ ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ. ಇಡಿ 15 ಯುಎನ್ಇ 2004, ದಿನಾಂಕ:05.03.2004 ರಂದು ಪದವಿ ಪರೀಕ್ಷೆ ಮತ್ತು ಸ್ನಾತಕೋತ್ತರ ಪರೀಕ್ಷೆ ಬರೆಯುವ ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗಳು ತಮಗೆ ಇಚ್ಛೆವುಳ್ಳ, ವಿದ್ಯಾರ್ಹತೆ ಮಿತಿಗೆ ಒಳಪಡದಂತಹ ಬರಹಗಾರರನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡುವಂತೆ ಆಯುಕ್ತರು, ಅಂಗವಿಕಲರ ಅಧಿನಿಯಮ 1995, ಬೆಂಗಳೂರು, ಈ ಪ್ರಸ್ತಾವನೆಯನ್ನು ಪರಿಗಣಿಸಿ ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗಳು ಪದವಿ ಪರೀಕ್ಷೆಯನ್ನು ಬರೆಯಲು ಬರಹಗಾರರನ್ನು ಉಪಯೋಗಿಸಿಕೊಳ್ಳಲು ಈ ಕೆಳಕಂಡ ಷರತ್ತುಗಳೊಂದಿಗೆ ಅನುಮತಿಸಲಾಗಿದೆ.
   a. The blind student may select the scribe.
   b. That the scribe need not have lower qualification than the student, provided that the scribe should not have the qualification (with the same optional and languages) pertaining to examination which the student is writing.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಇವರು ತಮ್ಮ ಸುತ್ತೋಲೆ ಸಂಖ್ಯೆ. ಇಡಿ 15 ಯುಎಸ್ಇ 2004. ದಿನಾಂಕ: 22.03.2004 ರನ್ವಯ ಈ ಕೆಳಗಿನಂತೆ ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆ ಬರೆಯುವ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳು ತಮಗೆ ಇಚ್ಛೆವುಳ್ಳ, ವಿದ್ಯಾರ್ಹತೆ ಮಿತಿಗೆ ಒಳಪಡದಂತಹ ಬರಹಗಾರರನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ ಹೊರಡಿಸಲಾದ ಇಡಿ 15 ಯುಎನ್ಇ 2004, ದಿನಾಂಕ: 11.03.2004 ರ ಸುತ್ತೋಲೆಯ ಮುಂದುವರಿಕೆಯಾಗಿ ಈ ಕೆಳಗಿನಂತೆ ನಿರ್ದೇಶನಗಳನ್ನು ನೀಡಲಾಗಿದೆ.

1 ಅಂಗವಿಕಲರು ಮತ್ತು ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳು ಬರಹಗಾರರ ಸಹಾಯಕ್ಕಾಗಿ ಮುಂಚಿತವಾಗಿ ತಾವು ಓದುತ್ತಿರುವ ಕಾಲೇಜಿನ ಪ್ರಾಂಶುಪಾಲರಿಗೆ ಅರ್ಜಿ ಸಲ್ಲಿಸಿ ಅನುಮತಿಯನ್ನು ಪಡೆದುಕೊಂಡಿರತಕ್ಕದ್ದು ಮತ್ತು ಈ ಕೋರಿಕೆ ಜೊತೆಗೆ ಅಂಗವಿಕಲತೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

ಮು.ತಿ.ನೋ

- -

2 ಬರಹಗಾರರ ಸಹಾಯವನ್ನು ಪಡೆದುಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳು ಪರೀಕ್ಷಾ ವೇಳೆಗಿಂತ ಒಂದು ಗಂಟೆ ಮುಂಚಿತವಾಗಿ ಬರಹಗಾರರ ವಿವರಗಳನ್ನು ಕಾಲೇಜಿನ ಪ್ರಾಂಶುಪಾಲರಿಗೆ ತಿಳಿಸಿ ಪೂರ್ವಾನುಮತಿ ಪಡೆಯುವುದು.

3 ಬರಹಗಾರರ ವಿದ್ಯಾರ್ಹತೆಯು ಅಂಗವಿಕಲ ಮತ್ತು ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗಿಂತ ಕಡಿಮೆ ವಿದ್ಯಾರ್ಹತೆ ಇರಬೇಕೆಂಬುದಾಗಿ ಏನೂ ಇಲ್ಲ. ಬರಹಗಾರರ ವಿದ್ಯಾರ್ಹತೆಯು ಹೆಚ್ಚಿಗೆ ಇದ್ದರೂ ಸಹ, ಅದು ಅಂಗವಿಕಲ ಮತ್ತು ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳು ತೆಗೆದುಕೊಳ್ಳುತ್ತಿರುವ ಪರೀಕ್ಷೆಯಲ್ಲಿನ ವಿಷಯಗಳು ಒಂದೇ ಆಗಿರಬಾರದು. ಉದಾಹರಣೆ ಒಬ್ಬ ಬಿ.ಎ ಅಥವಾ ಎಂ.ಎ ವಿದ್ಯಾರ್ಹತೆ ಹೊಂದಿರತಕ್ಕ ಬರಹಗಾರನು ಬಿ.ಎಸ್ಸಿ, ಪರೀಕ್ಷೆ ತೆಗೆದುಕೊಳ್ಳುತ್ತಿರುವ ಅಂಗವಿಕಲ ಮತ್ತು ದೃಷ್ಟಿದೋಷವುಳ್ಳ ವಿದ್ಯಾರ್ಥಿಗೆ ಬರಹಗಾರನಾಗಬಹುದು.

4 ಯಾವುದಾದರೂ ಒಂದು ಅಥವಾ ಹೆಚ್ಚಿನ ಅಂಗವಿಕಲತೆಯ ತೊಂದರೆಯಿಂದ ನರಳುತ್ತಿರುವ ಹಾಗೂ ದೃಷ್ಟಿ ಹಾಗೂ ಶ್ರವಣ ವೈಫಲ್ಯತೆ ಇರುವ ಅಭ್ಯರ್ಥಿಗಳಿಗೆ ಹೆಚ್ಚಿನ ಸಮಯಾವಕಾಶ ನೀಡುವುದು ಅಗತ್ಯವಾಗಿರುತ್ತದೆ. ಮೂರು ಗಂಟೆಯ ಅವಧಿಯ ಪ್ರಶ್ನೆ ಪತ್ರಿಕೆಗೆ ಗಂಟೆಗೆ 20 ನಿಮಿಷಗಳಂತೆ ಒಂದು ಗಂಟೆ ಹೆಚ್ಚಿನ ಸಮಯಾವಕಾಶ ನೀಡುವುದು. ಈ ಸೌಲಭ್ಯವನ್ನು ಬರಹಗಾರರ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವ ವಿದ್ಯಾರ್ಥಿಗಳಿಗೂ ಕೂಡ ಒದಗಿಸುವುದು.

5 ಶ್ರವಣ ದೋಷವುಳ್ಳ ವಿದ್ಯಾರ್ಥಿಗಳಿಗೆ ಭಾಷಾ ಸಮಸ್ಯೆ ಇರುವುದರಿಂದ ಬರೆಯುವಲ್ಲಿ ವ್ಯಾಕರಣ, ವಾಕ್ಯ ರಚನಾ ದೋಷಗಳು ಆಗುವ ಸಂಭವ ಇರುವುದನ್ನು ಪರಿಗಣಿಸಿ ಉತ್ತರ ಪತ್ರಿಕೆಯ ಮೌಲ್ಯ ಮಾಪಕರು ಅಂಥ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯನ್ನು ಗುರುತಿಸಿ, ತಾಳ್ಮೆಯಿಂದ ಮೌಲ್ಯಮಾಪನ ಮಾಡಲು ಅನುಕೂಲವಾಗುವಂತೆ ಶ್ರವಣ ದೋಷವುಳ್ಳ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳಿಗೆ ಹಸಿರು ಬಣ್ಣದ ಸ್ಟಿಕರ್ ಅಂಟಿಸುವಲ್ಲಿ ಕ್ರಮ ತೆಗೆದುಕೊಳ್ಳುವುದು.

ಈ ಅಧಿಕೃತ ಜ್ಞಾಪನ ಪತ್ರದಲ್ಲಿ ತಿಳಿಸಿರುವ ಮಾರ್ಗಸೂಚಿಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಅಳವಡಿಸುವ ಅವಶ್ಯಕತೆ ಇರುವ ಬಗ್ಗೆ ವಿಷಯವನ್ನು ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸಲಹೆಸೂಚನೆ/ ಮಾರ್ಗಸೂಚಿಗಳನ್ನು ಸರ್ಕಾರಕ್ಕೆ ಕಳುಹಿಸುವಂತೆ ಕೋರಿರುತ್ತಾರೆ.

ಸದರಿ ವಿಷಯದ ಬಗ್ಗೆ ಸಭೆಯ ಈ ಕೆಳಗಿನಂತೆ ನಿರ್ಣಯಿಸಲಾಯಿತು.

**ನಿರ್ಣಯ**

ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ (Differently Abled) ಪದವಿ ಪರೀಕ್ಷೆಗಳಲ್ಲಿ ವಿಶೇಷ ಸೌಲಭ್ಯಗಳನ್ನು ನೀಡುವ ಕುರಿತು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಮಂತ್ರಾಲಯವು ಹೊರಡಿಸಿರುವ ಮಾರ್ಗಸೂಚಿಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಅಳವಡಿಸಿಕೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಯಿತು.

Executive Director
Karnataka State Higher Education Council